

# ವಿನಯವಂತಿಕೆ ಹೃದಯವಂತಿಕೆ

ರಾಜ್‌ಕುಟುಂಬದ ಮೂರನೇ ತಲೆಮಾರಿನ ವಿನಯ್ ರಾಜ್‌ಕುಮಾರ್ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿ ಹಲವು ವರ್ಷಗಳೇ ಆಗಿವೆ. ತಾತನ ನೆರಳು ಮತ್ತು ಅಪ್ಪ, ಚಿಕ್ಕಪ್ಪ, ದೊಡ್ಡಪ್ಪಂದಿರ ಪ್ರಭೆಯಿಂದ ಹೊರಗೆ ತಮ್ಮದೇ ಗುರುತನ್ನು ಕಂಡುಕೊಳ್ಳಲು ಯತ್ನಿಸುತ್ತಿರುವಂತೆ ತೋರುವ ವಿನಯ್, ಸೂಪರ್‌ಹಿಟ್ ಸಿನಿಮಾಗಳನ್ನೇನೂ ಕೊಡಲಿಲ್ಲ. ಆದರೆ ಅವರು ಇದುವರೆಗೆ ನಟಿಸಿರುವ, ಒಪ್ಪಿಕೊಂಡಿರುವ ಸಿನಿಮಾಗಳ ಪಟ್ಟಿಯನ್ನು ನೋಡಿದರೆ ಅವರ ಅಭಿರುಚಿ ಮತ್ತು ಕಾಳಜಿಗಳು ಸ್ಪಷ್ಟವಾಗಿಯೇ ಗೊತ್ತಾಗುತ್ತವೆ. ನಡೆಯಲ್ಲಿಯೂ ಸರಳತೆಯನ್ನೇ ರೂಢಿಸಿಕೊಂಡಿರುವ, ಅತಿಯಾದ ಪ್ರಚಾರಪ್ರಿಯತೆಗಾಗಲಿ, ಹುಟ್ಟಿನಿಂದ ಬಂದ ಅನುಕೂಲಗಳನ್ನು ಬಳಸಿಕೊಂಡು ಮೆರೆಯುವ ಹಪಾಹಪಿತನವಾಗಲಿ ಅವರಲ್ಲಿ ಕಾಣಿಸುವುದೇ ಇಲ್ಲ.

ಇತ್ತೀಚೆಗಷ್ಟೇ ವಿನಯ್ ಫೇಸ್‌ಬುಕ್‌ನಲ್ಲಿ ಬರೆದಿರುವ ಪೋಸ್ಟ್ ಅವರ ವ್ಯಕ್ತಿತ್ವದ ಇನ್ನೊಂದು ಮಗ್ಗುಲನ್ನು ತೋರಿಸುವಂತಿದೆ. ಸಾಮಾನ್ಯವಾಗಿ ಮುಖ್ಯವಾಹಿನಿಯ ನಟರೆಲ್ಲರ ಸೋಷಿಯಲ್ ಮೀಡಿಯಾ ಪೋಸ್ಟ್‌ಗಳು ಅವರ ಸಿನಿಮಾ ಕುರಿತಾಗಿರುತ್ತದೆ ಅಥವಾ ಅವರ ಸ್ನೇಹಬಳಗದ ಇತರ ಸಿನಿಮಾಗಳ ಕುರಿತಾಗಿರುತ್ತದೆ. ಆದರೆ ವಿನಯ್ ಅವರ ಈ ಪೋಸ್ಟ್ ಕೊಂಚ ಭಿನ್ನವಾಗಿತ್ತು. ಯಾಕೆಂದರೆ ಅವರು ತಾವು ಇತ್ತೀಚೆಗೆ ನೋಡಿದ 'ಡೆಸ್ಡೆಮೋನಾ ರೂಪಕಂ' ನಾಟಕದ ಬಗ್ಗೆ ಬರೆದುಕೊಂಡಿದ್ದಾರೆ.

ಬರೀ ನಾಟಕದ ಹೊಗಳಿಕೆಯಷ್ಟೇ ಅವರ ಬರಹದ ಉದ್ದೇಶವಾಗಿಲ್ಲ. ಆ ನಾಟಕ ಹುಟ್ಟಿಸಿದ ಭಾವನೆಗಳ ನೆಪದಲ್ಲಿ ಬಹುಮುಖ್ಯ ಸಂಗತಿಯೊಂದನ್ನು ಅವರು ಚರ್ಚಿಸಿದ್ದಾರೆ. 'ಚಲನಚಿತ್ರವಾಗಲಿ, ನಾಟಕಗಳಾಗಲಿ, ಬುದ್ಧಿಹೀನ ಹರಟೆಗಳಾಗಲಿ, ಮಹಿಳೆಯ ದೃಷ್ಟಿಕೋನದಿಂದ ಮಹಿಳೆಯ ಕಥೆ ಇರುವುದಿಲ್ಲ. ಇದಕ್ಕೆ ನಮ್ಮ ಪುರಾಣಗಳೂ ಹೊರತಲ್ಲ' ಎಂದೇ ಆರಂಭವಾಗುವ ಅವರ ಬರಹ ಎಂ.ಡಿ. ಪಲ್ಲವಿ ಮತ್ತು ಬಿಂದುಮಾಲಿನಿ ಅವರು ಪ್ರಸ್ತುತಪಡಿಸಿದ ನಾಟಕಪ್ರದರ್ಶನದಲ್ಲಿ ಕಾಣಸಿಕ್ಕ ಸ್ತ್ರೀ ದೃಷ್ಟಿಕೋನವನ್ನು ಮೆಚ್ಚಿಕೊಂಡಿದ್ದಾರೆ. ಈ ಪ್ರದರ್ಶನ ಮಹಿಳೆಯರ ಕೊಡುಗೆಯನ್ನು ಪ್ರಶಂಸಿಸಲು ಉತ್ತಮ ಅವಕಾಶ ಮಾಡಿಕೊಟ್ಟಿದೆ ಎಂದು ಹೇಳುತ್ತಲೇ ತಮ್ಮ ತಾತನಾದ ಡಾ. ರಾಜ್‌ಕುಮಾರ್ ಅವರ ವ್ಯಕ್ತಿತ್ವ ರೂಪಿಸುವಲ್ಲಿ ಮತ್ತು ಅವರ ಜನಪ್ರಿಯತೆಯಲ್ಲಿ ಕುಟುಂಬದ ಹೆಣ್ಣುಮಕ್ಕಳ ಪಾತ್ರ ದೊಡ್ಡದಿತ್ತು ಎಂದೂ ಸ್ಮರಿಸಿಕೊಂಡಿದ್ದಾರೆ. ಈ ಎಲ್ಲರ ಕೊಡುಗೆಯನ್ನು ಎಂದಾದರೂ ಕಥೆಯ ರೂಪದಲ್ಲಿ ಹೇಳುವ ಆಸೆಯೂ ಅವರಿಗೆ ಇದೆಯಂತೆ. ■

## ಮೊಗ್ಗಿನ ಮನಸಿನ ನೆನಪಿನ ಭೋರ್ಗರೆತ



# ಸಾರಿ ಅಂತಿದಾರೆ ರಾಗಿಣಿ

ರಾಗಿಣಿ 'ಸಾರಿ' ಅಂತಿದಾರೆ! ಅಷ್ಟೇ ಅಲ್ಲ, 'ನೀವು ಮಾಡಿದ ಕರ್ಮ ತಿರುಗಿ ನಿಮ್ಮನ್ನು ಕಾಡದೇ ಬಿಡಲ್ಲ' ಅಂತಲೂ ಹೇಳ್ತಿದಾರೆ! ಇದೇನಿದು, ಸಾರಿ ಕೇಳಿ ಬೈತಿರೋ ಹಾಕಿದ್ಯಲ್ಲಾ... ಮತ್ಯಾವ ವಿವಾದಕ್ಕೆ ಸಿಕ್ಕಾಕೊಂಡ್ಲು ಈ ಹುಡ್ಗಿ ಅಂತ ಯೋಚಿಸ್ತಿದೀರಾ? ಇದು ವಿವಾದವಲ್ಲ, ಹೊಸ ಸಿನಿಮಾದ ಹೊಸ ವಾದ.

ಮೂಲತಃ ವಿಎಫ್‌ಎಕ್ಸ್ ತಂತ್ರಜ್ಞರಾಗಿರುವ ಬ್ರಹ್ಮ ಅವರ ನಿರ್ದೇಶನದ ಸಿನಿಮಾ ಹೆಸರು 'ಸಾರಿ... ಕರ್ಮ ರಿಟರ್ನ್ಸ್' ಸಿನಿಮಾಗೆ ಆ್ಯಕ್ಷನ್–ಕಟ್ ಹೇಳಿದ್ದಾರೆ. ಈ ಹಿಂದೆ ಅವರು 'ಸಿದ್ಧಿಸೀರೆ' ಎಂಬ ಸಿನಿಮಾವನ್ನು ನಿರ್ದೇಶಿಸಿದ್ದರು. ಈ ಚಿತ್ರದಲ್ಲಿ ರಾಗಿಣಿ ಮಹತ್ವದ ಅಷ್ಟೇ ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹಲವು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿರುವ ಈ ಸಿನಿಮಾದ ಒಂದು ಲಿರಿಕಲ್ ಸಾಂಗ್ ಅನ್ನು ಚಿತ್ರತಂಡ ಇತ್ತೀಚೆಗೆ ಬಿಡುಗಡೆ ಮಾಡಿದೆ. ಆ ಸಂದರ್ಭದಲ್ಲಿಯೇ ರಾಗಿಣಿ ಈ ಸಿನಿಮಾದ ಬಗ್ಗೆ, ತಮ್ಮ ಪಾತ್ರದ ಬಗ್ಗೆ ಉತ್ಸಾಹದಿಂದ ಮಾತಾಡಿದ್ದಾರೆ.